ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 39-44
©*IIMRD*, Mysuru

IIMRD JOURNALS
www.iimrd.com

# ಅಲ್ಲಮಪ್ರಭುವಿನ ದೃಷ್ಠಿಯಲ್ಲಿ ದೇವರು

**ಡಾ. ಎಂ. ಆರ್. ದೊಡಮನಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು & ಸ್ನಾತಕೋತ್ತರ ಪದವಿ ಕೇಂದ್ರ ರಾಮದುರ್ಗ

**ಸಾರಾಂಶ: (Abstract)**

*ಕರ್ನಾಟಕದ ಚರಿತ್ರೆಯಲ್ಲಿ 12ನೆಯ ಶತಮಾನದ ಶಿವಶರಣರು ಮಾಡಿದ ಸಮಾಜೋ–ಧಾರ್ಮಿಕ ಆಂದೋಲನವು ಎಲ್ಲ ಕಾಲಕ್ಕೂ ಪ್ರಸ್ತುತವಾದ ಒಂದು ಅಧ್ಯಾಯವಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ವಚನಕಾರರು ಕಲ್ಯಾಣದಲ್ಲಿ ಅನುಭವಮಂಟಪವನ್ನು ಸ್ಥಾಪಿಸಿ, ಅಲ್ಲಮ್ಮಪ್ರಭುಗಳನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು, ಎಲ್ಲ ಶಿವಶರಣರಿಗೆ ಮುಖಂಡರಾಗಿ ಬಸವಣ್ಣನವರು ಸಮಾಜ ಸುಧಾರಣೆಗೆ ಕ್ರಾಂತಿ ಕಹಳೆಯನ್ನು ಊದಿದರು. ವಚನಕಾರರು ಮಾನವ ಬದುಕಿನ ಮೌಲ್ಯಗಳತ್ತ ದಾಪುಗಾಲಿಟ್ಟರು. ಮನುಷ್ಯ ಎಂಬ ಪ್ರಾಣಿ, ಸಮಾಜ ಎಂಬ ಕೋಟೆಯಲ್ಲಿ, ನಂಬಿಕೆ ಎಂಬ ದೇವರು ತೋರಿಸಿದ ದಾರಿಯಲ್ಲಿ ಹೊಸ ಸಂಚಲನ ಮೂಡಿಸಿ, ಬದುಕನ್ನು ಪರಿವರ್ತನೆಗೊಳಿಸುವಲ್ಲಿ ಶ್ರಮಿಸಿದ್ದರು. "ವಚನ ಸಾಹಿತ್ಯ 11ನೆಯ ಶತಕದಲ್ಲಿ ಉಗಮವಾಗಿ, 12ರಲ್ಲಿ ಮಹಾಪ್ರವಾಹವಾಗಿ, ಆಮೇಲೆ ಹರಿಗಡಿದು 15, 16ರಲ್ಲಿ ಮತ್ತೆ ನೊರೆಯುಕ್ಕಿ, 17ರ ವರಿಗೆ ತೆಳುದೊರೆಯಾಗಿ ಮುಂದುವರಿಯಿತು." 12ನೆಯ ಶತಮಾನದ ವಚನಕಾರರು ಸಕಲ ಜೀವಿಗಳಿಗೆ ಒಳ್ಳೆಯದ್ದನ್ನೆ ಬಯಸಿದರು. ಸಮಾಜದಲ್ಲಿರುವ ಮೂಢನಂಬಿಕೆ, ಜಾತಿ ಅಂಧಾಚಾರಗಳನ್ನು ಗಂಡು–ಹೆಣ್ಣುವೆಂಬ ಬೇಧ ಭಾವ ತೊರೆ ಹಾಕಿದರು. ಅಹಿಂಸೆಯನ್ನೇ ತಮ್ಮ ಅಸ್ತ್ರವಾಗಿ ಮಾಡಿಕೊಂಡು, ಆತ್ಮಶುದ್ಧತೆಗಾಗಿ ಕಾಯಕವೇ ಕೈಲಾಸ ಎಂಬ ತತ್ವದಲ್ಲಿ ಸಾಗಿದರು. ಹೀಗಾಗಿ ಎಲ್ಲ ಕಾಲಕ್ಕೆ ಆದರ್ಶ ಪ್ರಾಯರಾಗಿ ಶಿವಶರಣರು ವಿಶ್ವಮಾನ್ಯರಾಗಿದ್ದಾರೆ. ಪ್ರಸ್ತುತ ಲೇಖನದಲ್ಲಿ ಅಲ್ಲಮಪ್ರಭುವಿನ ದೃಷ್ಠಿಯಲ್ಲಿ ದೇವರು ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಶಿವಶರಣರು, ಅಲ್ಲಮಪ್ರಭು.

## ಪೀಠಿಕೆ

ಆತ್ಮಶೋಧನೆ, ಸಮಾಜ ವಿಮರ್ಶೆ, ಧರ್ಮತತ್ವ ಪ್ರತಿಪಾದನೆ ಹಾಗೂ ಜೀವನದ ಮೌಲ್ಯಗಳನ್ನು ಸ್ಥಾಪಿಸುವ ಉದ್ದೇಶದಿಂದ ವಚನಗಳು ಹುಟ್ಟಿಕೊಂಡಿವೆ. ಇಂತಹ ಮಹತ್ವದ ಗುರಿಯನ್ನು ಹೊಂದಿದ ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ "ಶರಣ ಸಾಹಿತ್ಯ" ಎಂತಲೇ ಪ್ರಸಿದ್ಧಿಯಾಗಿದೆ. ಇದರ ಸ್ವರೂಪದ ಬಗ್ಗೆ ಹೇಳುವುದಾದರೆ ಸಾಮಾನ್ಯವಾಗಿ "ವಚನವೆಂಬುವುದು ಭಾವಗೀತೆ ಲಕ್ಷಣದಿಂದ ಕೂಡಿದ ಅನುಭಾವಗದ್ಯವೇ ಸರಿ"[1] ಈ ವಚನಗಳು ಸರಳ, ನೇರ ಮತ್ತು ಸ್ವಚ್ಚಂದವಾದ ರಚನೆಯಾಗಿದೆ. ಸಮಾಜದ

[1] ಮುಗಳಿ, ರಂ.ಶ್ರೀ., *ಕನ್ನಡ ಸಾಹಿತ್ಯ ಚರಿತ್ರೆ:* ಪುಟ. 84

*Please cite this article as:* ದೊಡಮನಿ, ಎಂ.ಆರ್. (2025). ಅಲ್ಲಮಪ್ರಭುವಿನ ದೃಷ್ಠಿಯಲ್ಲಿ ದೇವರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 39–44

ಜನರ ಅಂತರಾಳಕ್ಕೆ ಹೊಕ್ಕು ಹೆಕ್ಕಿ ತೆಗೆದ ತಿಳಿವಳಿಕೆ ಮಾತುಗಳಾಗಿವೆ. ಪ್ರಾಸ–ತ್ರಾಸಗಳ ಗೊಡವಿಗೆ ಹೋಗದೇ ಸ್ವತಂತ್ರ ರಚನೆಗಳಗಾಗಿವೆ.

ವಚನಗಳು ಹುಟ್ಟಿದ್ದು ಹೇಗೆಂದರೆ **"**ವ್ಯಕ್ತಿಯ ಸಮಗ್ರ ಜೀವನವು ಭಕ್ತಿಗೆ ಮತ್ತು ಮುಕ್ತಿಗೆ ಸಮರ್ಪಿತವಾಗಿ ಉನ್ನತ ಹಾಗೂ ಸಂಪನ್ನ ಅನುಭವಗಳು ಅಲೆ ಅಲೆಯಾಗಿ ಬಂದಾಗಲೇ ವಚನ ನಿರ್ಮಿತ ಸಾಧ್ಯ.**"**[2] ಇವುಗಳ ನಿರ್ಮಿತಿಗೆ ಇನ್ನೊಂದು ಪ್ರಮುಖ ಕಾರಣವೆಂದರೆ, ಅಂದಿನ ರಾಜಕೀಯ & ಧಾರ್ಮಿಕ ಸ್ಥಿತ್ಯಂತರಗಳಿಂದ ಜನಜೀವನವು ಅಲ್ಲಾಡಿಸಿ ಹೊಸ ಪಲ್ಲಟಗಳನ್ನು ಬರಮಾಡಿಕೊಂಡವು. ಇಂತಹ ಸಂದರ್ಭ ಕಸಿವಿಸಿದ ಜನಮನಗಳ ಭಾವದ ನೋವು ಹೋಗಲಾಡಿಸಲು ಹುಟ್ಟಿಕೊಂಡವು. **"**ನವೀನ ಸಾಹಸ ಬುದ್ದಿಯಿಂದ ಸಮಾಜಕ್ಕೆ ದಾರಿ ತೋರಿ ಕೆಡಕನ್ನು ತಿದ್ದುವ ಮಹಾವ್ಯಕ್ತಿಗಳ ಉದಯಕ್ಕೆ ಇದು ಯೋಗ್ಯ ಸಮಯದಲ್ಲಿ.**"** [3] ಈ ವಚನಕಾರರು ಹುಟ್ಟಿ ಸಮಾಜವನ್ನು ಶುದ್ಧಗೊಳಿಸಲು ಕಾರ್ಯಪ್ರವೃತ್ತರಾದರು. ಸಂದಿಗ್ಧ ಸಂದರ್ಭದಲ್ಲಿ ಬಾಳಿ ಬದುಕಿದ ಪ್ರಮುಖ ಶಿವಶರಣರಲ್ಲಿ ಅಲ್ಲಮಪ್ರಭು, ಕೂಡಾ ಒಬ್ಬರು. ಈ ಅಲ್ಲಮಪ್ರಭುಗಳು ದೇವರನ್ನು ಕಂಡುಕೊಳ್ಳುವ ಪರಿ ಯಾವ ರೀತಿಯಾಗಿತ್ತು? ಯಾವ ರೀತಿಯಲ್ಲಿ ತಮ್ಮಲ್ಲಿ ಮತ್ತು ಸಮಾಜ ಕಂಡುಕೊಳ್ಳಬೇಕು ಎಂಬ ಆಶಯದ  ಬಗೆಯನ್ನು ಚರ್ಚಿಸಲು ಪ್ರಯತ್ನಿಸಿದ್ದೇನೆ.

ಅಲ್ಲಮಪ್ರಭು ಬಸವಣ್ಣನಿಗಿಂತ ಹಿರಿಯನು ಮಾತ್ರವಲ್ಲದೇ, ಆ ಕಾಲದ ಶಿವಶರಣರಲ್ಲಿ ಶ್ರೇಷ್ಠ ವ್ಯಕ್ತಿಯಾಗಿದ್ದಾನೆ. ದಕ್ಷಿಣ ಕರ್ನಾಟಕದ ಬೆಳ್ಳಿಗಾವೆಯ ಹೂವಾಗಿ ಅರಳಿದ ಅಲ್ಲಮಪ್ರಭುದೇವರು ವೈರಾಗ್ಯಜ್ಞಾನಗಳಲ್ಲಿ ಪರಿಣತಪ್ರಜ್ಞಾನಾಗಿ, ಶಿವಾದ್ವೈತದ ಮೂರ್ತಿಯಾಗಿ ನಿಂತವರು. ಅಂದಿನ ಸಾಧಕರ ಮೇಲೆ ಎಲ್ಲ ರೀತಿಯಿಂದಲೂ ಪ್ರಭಾವ ಬೀರಿದನು. ಯಾವುದೇ ಮತ–ಪಂಥಕ್ಕೆ ಒಳಗಾಗದೇ ನೆಲೆನಿಂತರು. ತನ್ನ ನಿಷ್ಠುರತೆ ಜ್ಞಾನ, ಸತ್ಯ ಪ್ರೇಮತ್ವದಿಂದ ಎಲ್ಲ ಮನಸ್ಸುಗಳನ್ನು ತಿಳಿಗೊಳಿಸಿದನು. ಇವರು ಹೋದ ಹೋದಲ್ಲಿ ತನ್ನ ಜ್ಞಾನಪ್ರಭೆಯನ್ನು ಬೀರಿ, ಭೀತಿ ಸಂಕೋಚಗಳಲ್ಲದೇ ಲೋಕ ವಿಮರ್ಶೆ ಮಾಡಿದನು.

ಅಲ್ಲಮಪ್ರಭುಗಳ ವಚನಗಳಲ್ಲಿ **"**ಕರ್ಕಶವಾದ ತರ್ಕ, ಸಹಜವಕ್ರವಾದ ಬೆಡಗು, ಹುಟ್ಟುಗನ್ನಡದ ವಿಡಾಯ, ಧೀರ–ವಿಚಾರ, ಆಧ್ಯಾತ್ಮ ಸಾಹಸದ ಹಾಸ್ಯ ಮಾತಿನ ಸುಳಿವುಗಳಲ್ಲಿ ಜ್ಯೋತಿಯ ಹೊಳಹನ್ನು ಹುಟ್ಟಿಸುವ ಶಿಲ್ಪ, ಸರಸಸಜ್ಜನಿಕೆ**"** [4] ಎಂದು ಬೇಂದ್ರೆಯವರು ಅಲ್ಲಮಪ್ರಭುಗಳನ್ನು ಕೊಂಡಾಡಿದ್ದಾರೆ. ಎಲ್ಲದರಲ್ಲೂ ಗಟ್ಟಿತನವನ್ನು ಕಾಣುವ ಇವರು ದೇವರ ಕುರಿತು ಈ ಕೆಳಗಿನ ವಚನದಲ್ಲಿ ಹೀಗೆ ಹೇಳುತ್ತಾರೆ.

***"ನೆಲದ ಮರೆಯ ನಿಧಾನದಂತೆ***
***ಮುಗಿಲ ಮರಿಯಡಲಗಿದ ಮಿಂಚಿನಂತೆ***
***ಬಲಯ ಮರಿಯಲಡಗಿದ ಮರೀಚಿಯಂತೆ***

---

[2] ಮುಗಳಿ, ರಂ.ಶ್ರೀ., *ವಚನ ರೂಪದ ಚರಿತ್ರೆ ಮತ್ತು ಸಾರ್ಥಕ್ಯ*. ಪುಟ ಸಂಖ್ಯೆ: 66
[3] ಮುಗಳಿ, ರಂ.ಶ್ರೀ. *ಕನ್ನಡ ಸಾಹಿತ್ಯ ಚರಿತ್ರೆ*. ಪುಟ. 83
[4] ಬೇಂದ್ರೆ ದ.ರಾ. *ಸಾಹಿತ್ಯ ಸಂಶೋಧನೆ : ಪ್ರಭುಲಿಂಗಲೀಲೆ ವಿಮರ್ಶೆ* : ಪುಟ.151

***ಕಂಗಳ ಮರಿಯಲಡಗಿದ ಬೆಳಗಿನಂತೆ***
***ಗುಹೇಶ್ವರ, ನಿಮ್ಮ ನಿಲವು."*** [5]

ಇಲ್ಲಿ ಅಲ್ಲಮರು ಕಾಣಲು ಸಾಧ್ಯವಿರದ ದೇವರನ್ನು ನೆಲದ ಮರೆಯ ನಿಧಾನದಂತೆ, ಮೋಡದ ಮರೆಯಲ್ಲಿ ಅಡಗಿದ ಮಿಂಚಿನಂತೆ, ಬಯಲು ಮರೆಯಲ್ಲಿ ಅಡಗಿದ ಮರೀಚಿಯಂತೆ, ಕಣ್ಣುಗಳ ಮರೆಯಲ್ಲಿ ಅಡಗಿದ ಬೆಳಗಿನಂತೆ, ದೇವರ ಇರುತ್ತಾನೆಂದು ಹೇಳುತ್ತಾರೆ. ದೇವರನ್ನು ನಾವು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಿಲ್ಲ ಎಂಬ ಆಶಯವನ್ನು ವ್ಯಕ್ತಪಡಿಸಿ, ನಂಬಿಕೆ ಎಂಬ ದೇವರ ಜೀವಂತಿಕೆಗೆ ಪುಷ್ಟಿ ನೀಡುತ್ತಾರೆ. ಒಟ್ಟಿನಲ್ಲಿ ದೇವರನ್ನ ನಾವು ಕಾಣದಿದ್ದರೂ ಅವನನ್ನು ಕಾಣುವ ಹಂಬಲದ ಉತ್ಸುಕತೆಯಲ್ಲಿ ಸಾಗುವಂತೆ ಮಾಡುತ್ತಾರೆ. ನಾವು ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ನೆಲ ಹಿಂದೆಯಾಗಲಿ ಮುಗಿಲು ಮರೆಯಲ್ಲಿಯಾಗಲಿ ದೇವರನ್ನು ಹುಡುಕಲು ನಾವು ಸಾಧ್ಯವೇ ಇಲ್ಲ. ಆದರೆ ನಂಬಿಕೆ ಎಂಬ ಮನಸ್ಸಿನ ಭಾವಕ್ಕೆ ದೇವರು ಎಂಬ ದೊಡ್ಡ ನಿರಾಕಾರದ ರೂಪವನ್ನು, ಪ್ರಕೃತಿಯ ಈ ರಹಸ್ಯವನ್ನು ಭೇದಿಸಲು ಹೇಗೆ ಸಾಧ್ಯವಿಲ್ಲವೋ? ಹಾಗೇ ದೇವರನ್ನು ಕಾಣಲು ಸಾಧ್ಯವಿಲ್ಲ ಎನ್ನುತ್ತಾರೆ. ಅಲ್ಲಮಪ್ರಭುಗಳು ಇನ್ನೂ ಹಲವಾರು ವಚನಗಳಲ್ಲಿ ದೇವರ ಕುರಿತು ಹೇಳಿದ್ದನ್ನು ಕಾಣಬಹುದಾಗಿದೆ. ಅದನ್ನು ಈ ಕೆಳಗಿನ ವಚನದಲ್ಲಿ ನೋಡಬಹುದಾಗಿದೆ. ಇಲ್ಲಿ ದೇವರನ್ನು ಪ್ರತಿಯೊಬ್ಬರು ತಾವು ಮಾಡುವ ಕಾಯಕದಲ್ಲಿಯೇ ಶ್ರದ್ಧೆ ಭಕ್ತಿಗಳಲ್ಲಿ ದೇವರನ್ನು ಕಂಡುಕೊಳ್ಳಬಹುದು ಎನ್ನುತ್ತಾನೆ.

***"ಶಿಲೆಯೊಳಗಣ ಪಾವಕದಂತೆ***
***ಉದಕದೊಳಗಣ ಪ್ರತಿಬಿಂಬದಂತೆ***
***ಬೀಜದೊಳಗಣ ವೃಕ್ಷದಂತೆ***
***ಶಬ್ದದೊಳಗಣ ನಿಶ್ಯಬ್ದದಂತೆ***
***ಗುಹೇಶ್ವರ, ನಿಮ್ಮ ಶರಣಸಂಬಂಧ!."*** [6]

ಇಲ್ಲಿ ಶಿಲೆಯೊಳಗಿನ ಬೆಂಕಿ, ಬೀಜದೊಳಗಿನ ವೃಕ್ಷ ಮುಂತಾದವು ಅಗೋಚರ, ಆಗಮ್ಯ. ಆದರೆ ಪ್ರಯತ್ನದಿಂದ, ಕಾಲವಶತೆಯಿಂದ ಅವು ಗೋಚರವೂ ಗ್ರಾಹ್ಯವೂ ಆಗುತ್ತವೆ. ಹಾಗೆಯೇ ಶಿವಶರಣರಲ್ಲಿ ಅಡಗಿರುವ ಪರಮಾತ್ಮನನ್ನು ಸಾಧನೆಯಿಂದ ಸಾಕ್ಷಾತ್ಕರಿಸಿಕೊಳ್ಳುವುದು ಮಾತ್ರ ಸಾಧ್ಯ ಎಂದು ಹೇಳುತ್ತಾನೆ. ಭಗವಂತ ಮಿಥ್ಯೆಯಲ್ಲ ಅವನನ್ನು ಕಾಣಬಹುದು. ಆದರೆ ಸಾಮಾನ್ಯರಿಗೆ ಕಾಣಲು ಸಾಧ್ಯವಿಲ್ಲವೆನ್ನುತ್ತಾನೆ. ಹೀಗೆ ಮತ್ತೊಂದು ವಚನದಲ್ಲಿ ದೇವರು 'ಶಿಶು ಕಂಡ ಕನಸಿನಂತೆ ಗುಹೇಶ್ವರನು ಹೆಸರಿಲ್ಲದ ಆಲಯ' [7] ಎಂಬ ಉಪಮೆಯಿಂದ ಕೊಡಲಾಗಿದೆ. 'ಹೆಸರಿಲ್ಲದ ಬಯಲು' ಎಂಬಲ್ಲಿ ಆ ಪರವಸ್ತು ನಾಮರೂಪ ಗುಣಾತೀತವಾದದು ಎಂದು ಗ್ರಹಿಸುತ್ತಾರೆ. ಮುಂದುವರೆದು ಮನುಷ್ಯ ಶಾಶ್ವತನಲ್ಲ, ದೇವರು ಶಾಶ್ವತ.

[5] ಬಸವರಾಜು, ಎಲ್. *ಅಲ್ಲಮನ ವಚನ ಚಂದ್ರಿಕೆ.* ಪುಟ. 01
[6] ಬಸವರಾಜು, ಎಲ್. (ಸಂ.) *ಅಲ್ಲಮನ ವಚನ ಚಂದ್ರಿಕೆ.* ಪುಟ. 01
[7] ಸಿ.ಪಿ.ಕೆ. *ಪ್ರಮುಖ ವಚನಕಾರರು.* ಪುಟ. 55, 56

ಆದರೂ ಮಾನವನು ದೇವನಾಗಬಹುದು, ಇಬ್ಬರಿಗೂ ಅಂತರವಿಲ್ಲ ಎಂದು ಭರವಸೆ ಕೊಡುತ್ತಾ ಈ ಕೆಳಗಿನ ವಚನದಲ್ಲಿ ಹೀಗೆ ಹೇಳುತ್ತಾರೆ.

***"ಆಗ ಹುಟ್ಟಿ ಬೇಗ ಸಾವ***
***ಕಾಯಗೊಂಡ ಮಾನವ***
***ನೀ ದೇವರೆನಿಸಿಕೊಂಬುವುದಾದಂತರ ಹೇಳಾ!***
***ದೇವರು ಸಾವರೆ?***
***ದೇವರಿಗೂ ಸಾವರಿಗೂ ಆವುದಂತರ ಹೇಳಾ!***
***ಗುಹೇಶ್ವರ!."*** [8]

'ದೇವರು', 'ಸಾವರು' ಎಂಬ ಶಬ್ದಗಳಲ್ಲಿ ಅಂತರ ಅಲ್ಪ; ಅವುಗಳ ಅರ್ಥದಲ್ಲಿ ಧ್ರುವಗಳಷ್ಟು ಅಂತರ. ಅದನ್ನು ಅಳಿಸಿಹಾಕಬಹುದು ಸಾಧನೆಯಿಂದ. 'ಆಗ ಹುಟ್ಟಿ ಬೇಗ ಸಾವ' ಎಂಬಲ್ಲಿರುವ ನಿಯತ ಪದ್ಯಲಯವನ್ನು ಲಕ್ಷಿಸಬಹುದು.'[9] ಹೀಗೆ ಕಾಣದ ದೇವರ ಆಕಾರವನ್ನು ನಮ್ಮಲೇ ಕಂಡುಕೊಳ್ಳಲು ಸಾಧ್ಯ ಎಂಬುವುದನ್ನು ಸಾಬೀತುಪಡಿಸಿದ್ದಾರೆ.

ನಂತರದಲ್ಲಿ ಕರ್ನಾಟಕದಲ್ಲಿ ಹುಟ್ಟಿದ ಮಹತ್ವದ ರತ್ನಗಳ ಪೈಕಿ ಬಸವಣ್ಣನವರು ಪ್ರಮುಖರು, ನವ ಸಮಾಜ ನಿರ್ಮಾಣಕ್ಕೆ ಅವಿರತವಾಗಿ ದುಡಿದು ಮಾಡಿದ ಮಹನೀಯರಲ್ಲಿ ಇವರೊಬ್ಬರು. ಬಸವಣ್ಣನವರು ಅಂತರಂಗ ಬಹಿರಂಗ ಉಭಯ ಶುದ್ದಿಯನ್ನು ಸಾಧಿಸುವ ಮೂಲಕ ವಿಶ್ವಮಾನವತಾವಾದಿಯಾಗಿ, ಅಲ್ಲದೇ ಸ್ವತಂತ್ರ ವಿಚಾರವಾದಿಯಾಗಿ ಗುರುತಿಸಿಕೊಂಡಿದ್ದಾರೆ. 12ನೆಯ ಶತಮಾನದ ಹಾಗೂ ಸಮಕಾಲಿನ ಎಲ್ಲ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. 1500ಕ್ಕಿಂತಲೂ ಹೆಚ್ಚಿಗೆ ವಚನಗಳನ್ನು ಬಸವಣ್ಣವರು ರಚಿಸಿದಿದ್ದಾರೆ. ಮನುಷ್ಯರಾಗಿಯೂ ಮನುಷ್ಯರಂತಿಲ್ಲದವರ ಶೋಚನೀಯ ಸ್ಥಿತಿ ಬಸವಣ್ಣನವರ ಅಂತಃಕರಣವನ್ನು ಕಲಕಿರಬೇಕು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸ್ವಾತಂತ್ರ್ಯಕ್ಕೆ ಎರವಾಗಿ ಹೇಗೆ ಹೇಗೂ ಜೀವ ಹಿಡಿದು ಬದುಕಿದವರ ಪ್ರತ್ಯಕ್ಷ ಚಿತ್ರ ಮತ್ತು ಅದಕ್ಕೆ ಕಾರಣ ತಿಳಿದರೆ ಸಾಕು ಮಾನವೀಯತೆ ಎಂಬುದು ಮನುಷ್ಯನಿಗೆ ಸಲ್ಲುತ್ತದೆ ಎಂಬುದು ಅರಿವಿಗೆ ನಿಲುಕುತ್ತದೆ. ಇಲ್ಲಿ ದೇವರ ವಿಶ್ವರೂಪವನ್ನು ಅನಾವರಣಗೊಳಿಸುತ್ತಾರೆ. ಅದು ಕೂಡಾ ಅಲ್ಲಮರಂತೆ ಎಂಬ ಸಮಾನ ಅಂಶವನ್ನು ಕಾಣಬಹುದು. ದೇವರು ಎಲ್ಲಿದ್ದಾನೆ? ಇಡಿಯಾಗಿ ಎಲ್ಲ ಕಡೆಯಲ್ಲಿಯೂ ನೀವು ಇದ್ದಿರಿ. ಪಾತಾಳದಲ್ಲಿ ನಿಮ್ಮ ಪಾದಗಳು, ಬ್ರಹ್ಮಾಂಡದಲ್ಲಿ ನಿಮ್ಮ ಶ್ರೀಮುಕುಟ ನೀವು ಆಗಮ್ಯ ಆಗೋಚರ, ಅಪ್ರತಿಮರಾಗಿದ್ದೀರಿ ಎನ್ನುತ್ತಾರೆ. ಬಸವಣ್ಣವರು ಕೂಡಾ ಅಲ್ಲಮರಂತೆ ದೇವರು ನಿರಾಕಾರ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಎಲ್ಲ ಕಡೆಯಲ್ಲಿ ದೇವರು ಇದ್ದಾನೆ. ಅವನು ಸಕಲ ಜಗತ್ತಿನ ರೂವಾರಿ, ವಿಶ್ವತೋಮುಖ, ವಿಶ್ವತೋಬಾಹು ವಿಶ್ವತೋವಾದನಾಗಿದ್ದಾನೆ. ದೇವರು 'ಉದಕದೊಳಗೆ. . . . . .ಸ್ನೇಹದಂತಿದ್ದಿತು' ಸ್ವಾಮಿ–ನೀನು, ಶಾಶ್ವತ–ನೀನು ಮುಂತಾದ ಬಸವಣ್ಣನವರ

[8] ಅದೇ. ಪುಟ ಸಂಖ್ಯೆ: 57
[9] ಅದೇ ಪುಟ ಸಂಖ್ಯೆ: 57

ವಚನಗಳ ಮೂಲಕ ದೇವರ ನಿರಾಕಾರವನ್ನು ಪರಿಯನ್ನು ತೋರಿಸಿಕೊಟ್ಟಿದ್ದಾರೆ. ಮೇಲಿನ ವಚನವನ್ನು ಗಮನಿಸಿದರೆ ಸುಗಮ ಹಾಗೂ ಉದಾತ್ತ ಜೀವನ ನಿರ್ವಹಣೆಗೆ ಮತ್ತು ಜೀವನ್ಮುಕ್ತಿಗೆ ನಾವು ಸಾಗುವ ಎಲ್ಲ ದಾರಿಯಲ್ಲಿ ದೇವರು ಇದ್ದಾನೆಂದು ಹೇಳುತ್ತಾರೆ.

ಮುಂದೆ ಸ್ವಾತಂತ್ರ್ಯ ಹೀನಳಾದ ಸ್ತ್ರೀ ಕಣ್ಣು ತೆರೆಸಿದ್ದು 12ನೆಯ ಶತಮಾನ. ಹಿಂದೆ ಹೆಣ್ಣು ಮಾಯೆ, ದುಷ್ಟಶಕ್ತಿಯೆಂದು ತಿಳಿದು ಸಾಧನೆಯಿಂದ ಅವಳನ್ನು ದೂರ ಸರಿಸಿದ್ದರು. ಇಂತಹ ಸಮಯದಲ್ಲಿ ಬಸವಣ್ಣನವರ ಸಹಕಾರದಿಂದ ಹೆಣ್ಣು ಸಂಸಾರದ ಕಣ್ಣು ಮಾತ್ರವಲ್ಲದೇ ಸಮಾಜದಲ್ಲಿ ಅವಳ ಪಾತ್ರವು ಪ್ರಧಾನವಾದದ್ದು ಎಂಬುದನ್ನು ತೋರಿಸಿಕೊಟ್ಟವಳು ಅಕ್ಕಮಹಾದೇವಿ. ಕನ್ನಡ ಸಾಹಿತ್ಯ ಚರಿತೆಯಲ್ಲಿ ಕನ್ನಡ ಮೊದಲ ಕವಿಯತ್ರಿ ಎಂತಲೇ ಖ್ಯಾತಿಯಿಂದ ಅಕ್ಕಮಹಾದೇವಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇಂತಹ ಆಧ್ಯಾತ್ಮಿಕ ಹಂಬಲದ ಬೆಂಬಲಕ್ಕಾಗಿ ಕಾದ ವಚನ ಸ್ತ್ರೀರತ್ನವಾದ ಅಕ್ಕಮಹಾದೇವಿಯು ಎಲ್ಲ ಹೆಣ್ಣು ಮಕ್ಕಳಿಗೆ ಆದರ್ಶ ಪ್ರಾಯಳಾಗಿದ್ದಾಳೆ. ಉಸಿರುಗಟ್ಟಿನ ವಾತಾವರಣದಲ್ಲಿ ಬದುಕುತ್ತದ್ದ ಸ್ತ್ರೀ ಸಂಕುಲಕ್ಕೆ ಶರಣರು ಅವರ ಬದುಕಿನ ದಾರಿದೀಪವಾದರು. ಅವರ ಪೋತ್ಸಾಹ ಬಲದಿಂದ ಶರಣರ ಸಮಾನವಾಗಿ ವಚನಕಾರ್ತಿಯರು ಸ್ವಾತಂತ್ರ್ಯವನ್ನು ಪಡೆದುಕೊಡಿದ್ದಾರೆ. ಅವರಲ್ಲಿ ಅಕ್ಕಮಹಾದೇವಿಯು ಕೂಡಾ ಅಗ್ರಗಣ್ಯರಾಗಿದ್ದಾರೆ. ಅಕ್ಕಮಹಾದೇವಿಯ ದೇವರ ಆಕಾರವನ್ನು ಅಲ್ಲಮರ ಹಾಗೇ ಸಮಾನ ಅಂಶವನ್ನು ಈ ಕೆಳಗಿನ ವಚನದಲ್ಲಿ ಹೀಗೆ ಗುರುತಿಸಬಹುದಾಗಿದೆ.

***"ನೆಲದ ಮರೆಯ ನಿಧಾನದಂತೆ***
***ಫಲದ ಮರೆಯ ರುಚಿಯಂತೆ***
***ಶಿಲೆಯ ಮರೆಯ ಹೇಮದಂತೆ***
***ತಿಲದ ಮರೆಯ ತೈಲದಂತೆ***
***ಮರದ ಮರೆಯ ತೇಜದಂತೆ***
***ಭಾವದ ಮರೆಯ ಬ್ರಹ್ಮವಾಗಿಪ್ಪ***
***ಚೆನ್ನಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು."***[10]

ಇಲ್ಲಿ ಪರಮಾತ್ಮನ ಸ್ವರೂಪ, ಆತ್ಮಪರಮಾತ್ಮ ಸಂಬಂಧ, ಜೀವ ಜಗತ್ತಿನ ಸಂಬಂಧಗಳ ಕುರಿತು ಅವಳ ಚಿಂತನೆಯು ಪ್ರಧಾನವಾಗಿದೆ. ಈ ಮೇಲಿನ ವಚನದಲ್ಲಿ ದೇವರು ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮರಂತೆ, ತಿಲದ ಮರೆಯ ತೈಲದಂತೆ, ಮರದ ಮರೆಯ ತೇಜದಂತೆ ಎನ್ನುವ ಮೂಲಕ ದೇವರು ನಮ್ಮೊಳಗೆ ಅಡಗಿದ್ದಾನೆ ಹೊರತು ಬೇರೆಯಲ್ಲೂ ಅಲ್ಲ ಎನ್ನುತ್ತಾಳೆ. ಮಹಾದೇವಿಯಕ್ಕ ವಚನ ಸಾಹಿತ್ಯಾಕಾಶದ ಉಜ್ವಲ ನಕ್ಷತ್ರ. ಶ್ರೇಷ್ಠ ಅನುಭಾವಿ. ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವವನ್ನು ಏಕಕಾಲಕ್ಕೆ ದಿಕ್ಕರಿಸಿ ನಿಂತವಳು. ಅಕ್ಕಮಾಹಾದೇವಿ ವಚನಗಳಲ್ಲಿ ಆಧ್ಯಾತ್ಮಿಕ ದೇವರ ಸ್ವರೂಪದ ಗಂಡನ್ನು ಎಲ್ಲ ಕಡೆಯಲ್ಲಿ ನೀನೇ ದೇವಾ ಎನ್ನುವುದರ

[10] ಬಸವರಾಜು, ಎಲ್. (ಸಂ.) ಅಕ್ಕನ ವಚನಗಳು. ಪುಟ.43

ಮೂಲಕ ದೇವರನ್ನು ಈ ಕೆಳಗಿನಂತೆ ಕಾಣಬಹುದಾಗಿದೆ. **"**ಅಯ್ಯ ಪಾತಾಳವಿತ್ತಿತ್ತ, ಶ್ರೀಪಾದವತ್ತತ್ತ ಬ್ರಹ್ಮಾಂಡವಿತ್ತಿತ್ತ, ಮಣಿಮಕುಟವತ್ತತ್ತ ಅಯ್ಯ, ದಶದಿಕ್ಕು ಇತ್ತಿತ್ತ, ದಶಭುಜಗಳತ್ತತ್ತ ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ!**"**[11] ಇಲ್ಲಿ ಪಾತಾಳದಲ್ಲಿ ನಿಮ್ಮ ಪಾದಗಳು, ಬ್ರಹ್ಮಾಂಡದಲ್ಲಿ ತಮ್ಮ ಮುಕುಟ, ದಶದಿಕ್ಕುಗಳಲ್ಲಿ, ದಶಭುಜಗಳಲ್ಲಿ ನೀನೇ ದೇವಾ ಇದ್ದಿಯಾ ಎನ್ನುತ್ತಾಳೆ. ಇಲ್ಲಿ ಕೂಡಾ ದೇವರು ನಾವು ಮಾಡುವ ಕಾರ್ಯದ ನಂಟಿನಲ್ಲಿ ಅಡಗಿದೆ ಎಂಬುದನ್ನು ಮನಗಾಣುತ್ತಾಳೆ. ಇನ್ನೂ 'ಜಗವೆಲ್ಲ ನೀನಾಗಿ ಇಪ್ಪೆ' ಎಂಬ ನಿರ್ಣಯದಲ್ಲಿ ದೇವರನ್ನು ಬಸವಣ್ಣನವರ ಹಾಗೇ ಜಗದಗಲ, ಮುಗಿಲಗಲ, ಮಿಗೆಯಲಗಲ ಎನ್ನುವ ಮಾತಿಗೆ ಇಲ್ಲಿ ಜೇಡರ ದಾಸಿಮಯ್ಯರವರು ಜಗತ್ತಿನ ತುಂಬೆಲ್ಲ ನೀನೇ ಎಂದು ಪ್ರತಿಪಾದಿಸುತ್ತಾರೆ.

ಒಟ್ಟಿನಲ್ಲಿ ಅಲ್ಲಮಪ್ರಭುವಿನ ವಚನಗಳಲ್ಲಿಯ ನೆಲ, ಮುಗಿಲು, ಕಂಗಳಗಳಾಗಲಿ, ಜಗದ ಮುಗಿಲ ಮಿಗೆಯ, ಪಾತಾಳ ಬ್ರಹ್ಮಾಂಡವಾಗಲಿ, ನೆಲದ, ಫಲದ, ಶಿಲೆಯ, ತಿಲದ ಮರೆಯ ಇವುಗಳನ್ನು ನಾವು ಹೇಗೆ ಕಾಣಲು ಸಾಧ್ಯವಿಲ್ಲವೋ ಹಾಗೇ ದೇವರನ್ನು ಕಾಣಲು ಸಾಧ್ಯವಿಲ್ಲ ಎಂಬ ನಿಲುವಿಗೆ ಬರುತ್ತಾರೆ. ದೇವರ ಸ್ವಾತಂತ್ರ್ಯ ಅಸ್ತಿತ್ವವಾಗಲಿ, ಆಕಾರವಾಗಿ ಇರಲು ಸಾಧ್ಯವಿಲ್ಲ ಎಂಬುದನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಏನೇ ಇರಲಿ ವಚನ ಸಾಹಿತ್ಯ ಬಹು ಬಗೆಗೆ ಭಿನ್ನಮತ ಶಕ್ಯವಿಲ್ಲ, ಅದರ ಒಂದೊಂದು ಮುಖವನ್ನ ಒಬ್ಬೊಬ್ಬರು ತಮ್ಮದೇ ರೀತಿಯಲ್ಲಿ ವಿವೇಚಿಸಬಹುದು. ಈ ನಿಟ್ಟಿನಲ್ಲಿ ನಾನು ಕೂಡಾ ಅಲ್ಲಮಪ್ರಭುರವರು ದೇವರನ್ನು ಕಂಡುಕೊಂಡ ಪರಿಯನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಅಲ್ಲದೇ ವಚನ ಸಾಹಿತ್ಯ ಸೂಕ್ಷ್ಮ ಪದಗಳನ್ನು ಎಳೆ–ಎಳೆಯಾಗಿ ನೋಡಿದಾಗ ಹೊಸತನ ಅಂಶಗಳು ಕಂಡುಬರುತ್ತವೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು. ಎಲ್ (ಸಂ.). (2001). *ಅಲ್ಲಮನ ವಚನ ಚಂದ್ರಿಕೆ.*
- ಬೇಂದ್ರೆ ದ.ರಾ. (2010). *ಸಾಹಿತ್ಯ ಸಂಶೋಧನೆ : ಪ್ರಭುಲಿಂಗಲೀಲೆ ವಿಮರ್ಶೆ.*
- ಸಿ.ಪಿ.ಕೆ. (2009). *ಪ್ರಮುಖ ವಚನಕಾರರು.*
- ಮುಗಳಿ, ರಂ.ಶ್ರೀ. (2009). *ವಚನ ರೂಪದ ಚರಿತ್ರೆ ಮತ್ತು ಸಾರ್ಥಕ್ಯ.* **ಗ್ರಂಥ** ದಸ್ತಗೀರ ಅಲ್ಲಿಭಾಂಯ್ ಮತ್ತು ಎಂ.ಬಿ ಹೂಗಾರ (ಸಂ.). ಮಧ್ಯಕಾಲೀನ ಕನ್ನಡ ಕಾವ್ಯ ಮತ್ತು ಲೇಖನಗಳು
- ಮುಗಳಿ, ರಂ.ಶ್ರೀ. (2008). ಕನ್ನಡ ಸಾಹಿತ್ಯ ಚರಿತ್ರೆ
- ಪಾನಬುಡೆ ಎಸ್.ಎಂ. ಮತ್ತು ವೈ.ಎಸ್.ಹೊಸಮನಿ. (ಸಂ.). (2012). ಸಾಹಿತ್ಯ ಸಂಗಾತಿ–2, ಐಚ್ಛಿಕ ಕನ್ನಡ.
- ವೀರಣ್ಣ ರಾಜೂರ. (ಸಂ.) (2002). *ಮುತ್ತಿನ ಹಾರ*


[11] ಬಸವರಾಜು, ಎಲ್. (ಸಂ.) ಅಕ್ಕನ ವಚನಗಳು. ಪುಟ. 45